ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಜೆಎಂಎಫ್‌ಸಿ ನ್ಯಾಯಾಲಯ, ತರೀಕೆರೆ

ಸಿ.ಸಿ.ನಂ.714/2024

ಚಾಸಾ: 1 ಪ್ರಾಸಾ:1

ದಿನಾಂಕಃ .24.07.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು- | ಶಶಾಂಕ |
| ತಂದೆಯ ಹೆಸರು- | ಕೃಷ್ಣ ಮೂರ್ತಿ |
| ವಯಸ್ಸು - | 27 ವರ್ಷ |
| ಉದ್ಯೋಗ- | ಖಾಸಗಿ ಕೆಲಸ |
| ವಾಸ- | ತರೀಕೆರೆ |

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

1. ನನಗೆ ಆರೋಪಿಯ ಪರಿಚಯವಿರುತ್ತದೆ. ಆರೋಪಿಯ ನಮ್ಮ ಜೊತೆ ಜಗಳ ಮಾಡಿರುವುದಿಲ್ಲ, ನಮಗೆ ಹೊಡೆದಿರುವುದಿಲ್ಲ, ಅವಾಚ್ಯವಾಗಿ ಬೈದಿರುವುದಿಲ್ಲ ಹಾಗೂ ಜೀವ ಬೆದರಿಕೆ ಹಾಕಿರುವುದಿಲ್ಲ. ನಾನು ಪೋಲೀಸರಿಗೆ ಯಾವುದೇ ದೂರು ಸಲ್ಲಿಸಿರುವುದಿಲ್ಲ. ಈಗ ಸುಮಾರು 2 ವರ್ಷಗಳ ಹಿಂದೆ ಪೋಲೀಸರು ಎರಡು ದಾಖಲೆಗಳಿಗೆ ನನ್ನ ಸಹಿಗಳನ್ನು ಪಡೆದುಕೊಂಡಿರುತ್ತಾರೆ.

2. ಸಾಕ್ಷಿಗೆ ದೂರು ಹಾಗೂ ಮಹಜರ ಮೇಲೆ ಇರುವ ಸಹಿಗಳನ್ನು ತೋರಿಸಿದ್ದು ಅವರು ಅವುಗಳನ್ನು ಒಪ್ಪಿಕೊಂಡಿದ್ದರಿಂದ ದೂರನ್ನು ನಿಪಿ-1 ಹಾಗೂ ಮಹಜರನ್ನು ನಿಪಿ.2 ಮತ್ತು ಸಾಕ್ಷಿಯ ಸಹಿಗಳನ್ನು ನಿಪಿ-1(ಎ) ಮತ್ತು 2(ಎ) ಎಂದು ಗುರುತಿಸಲಾಯಿತು. ನಿಪಿ-1 ಮತ್ತು 2 ರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ ಎಂದು ಹೇಳಿ ಸಾಕ್ಷಿಗೆ ಪಾಟೀ ಸವಾಲು ಮಾಡಲು ಮಾನ್ಯ ಎಪಿಪಿ ರವರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ**

3. ದಿನಾಂಕ 13.09.2024 ರಂದು ರಾತ್ರಿ 9 ಗಂಟೆಗೆ ಆರೋಪಿಯು ನನ್ನ ಮತ್ತು ಚಾಸಾ-2 ರವರ ಜೊತೆ ಜಗಳ ಮಾಡಿ ನಮಗೆ ಅವಾಚ್ಯ ಶಬ್ದಗಳಿಂದ ಬೈದು ಕೈಯಿಂದ ಮತ್ತು ರಾಡಿನಿಂದ ಹೊಡೆದು ರಕ್ತಗಾಯ ಪಡಿಸಿ ಜೀವ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಈ ಕುರಿತು ನಾನು ನಿಪಿ-1 ರಂತೆ ದೂರು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಅದೇ ರೀತಿ ಸದರಿ ಗಲಾಟೆ ವಿಚಾರವಾಗಿ ಪೊಲೀಸರು ದಿನಾಂಕ 14.09.2024 ರಂದು ಬೆಳಗ್ಗೆ 11.30 ರಿಂದ ಮಧ್ಯಾಹ್ನ 11.30 ಗಂಟೆಯವರೆಗೆ ನನ್ನ ಸಮಕ್ಷಮ ನಿಪಿ.2 ರಂತೆ ಮಹಜರ ಜರುಗಿಸಿ

ಫೋಟೊಗಳನ್ನು ತೆಗೆದು ಸ್ಥಳದಿಂದ ರಾಡನ್ನು ಅಮಾನತುಪಡಿಸಿಕೊಂಡಿರುತ್ತಾರೆ ಸರಿಯಲ್ಲ. ನನಗೆ ನಿಪಿ–1 ಮತ್ತು 2 ರಲ್ಲಿ ಬರೆದಿರುವ ವಿಚಾರಗಳು ಗೊತ್ತಿದ್ದರೂ ಸಹ ನಾನು ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಹೆಚ್. ಸಿ. ಎಸ್ ವಕೀಲರಿಂದಃ**

ಪಾಟೀ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

**ಮರು ವಿಚಾರಣೆಃ** ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

Sd/-

(ಮುಜಫರ್)

ಹಿರಿಯ ಸಿ.ಜೆ. ಮತ್ತು ಜೆಎಂಎಫ್‌ಸಿ

ತರೀಕೆರೆ .